4. ನಿಲುವಳಿ ಸೂಚನೆ

(ಮಂಡನೆಗೆ ಅನುಮತಿ ಕೋರಿಕೆ)

ವಿಷಯ: ರಾಜ್ಯದ ಸ್ಥಳೀಯ ಸಂಸ್ಥೆಗಳಿಗಾಗಿ 100 ಕೋಟಿ ರೂಪಾಯಿಗಳ ಹುಡ್ಕೋ ಸಾಲದಿಂದ ಕೈಗೊಂಡಿರುವ ಕಾಮಗಾರಿಗಳಲ್ಲಿನ ಅವ್ಯವಹಾರದ ಬಗ್ಗೆ.

ಎ.ರಾಮದಾಸ್(ಕೃಷ್ಣರಾಜ): ಮಾನ್ಯ ಅಧ್ಯಕ್ಷರೆ, ನಾನು 3 ನಿಮಿಷದಲ್ಲಿ ನಿಮ್ಮ ಮನವನ್ನು ಒಲಿಸುವುದಕ್ಕೆ ಪ್ರಯತ್ನಿಸುತ್ತೇನೆ. ಇದು ಬಹಳ ಪ್ರಮುಖವಾದ ಅಂಶವಾಗಿರುವುದರಿಂದ ಅದನ್ನು ಹೇಳುವುದಕ್ಕೆ ನನಗೆ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು: ಹುಡ್ಕೋ ಸಾಲದ 100 ಕೋಟಿ ರೂಪಾಯಿಗಳ ಅವ್ಯವಹಾರ ಎನ್ನುವ ವಿಷಯದ ಬಗ್ಗೆ ನೋಟೀಸ್ ಕೊಟ್ಟಿದ್ದಾರೆ.

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು): ಮಾನ್ಯ ಅಧ್ಯಕ್ಷರೆ, ನನ್ನ ಹತ್ತಿರ ಈಗ ತಾನೆ ಆ ನೋಟೀಸ್ ಬಂದಿದೆ, ನಾನು ತಮ್ಮಿಂದ ಅಪೇಕ್ಷೆಯನ್ನು ಮಾಡುವುದು, ಅದನ್ನು ತಾವು ತಿರಸ್ಕರಿಸುತ್ತೀರೋ ಅಥವಾ ಪುರಸ್ಕರಿಸುತ್ತೀರೋ ಆ ಮಾತು ಬೇರೆ. ಆದರೆ 60ನೇ ನಿಯಮದ ಪ್ರಕಾರ ಯಾವುದು ನಿಲುವಳಿ ಸೂಚನೆಯಾಗುತ್ತದೆ ಎಂಬುದರ ಬಗ್ಗೆ ತಾವು ಗಮನಿಸಬೇಕು. ಇಲ್ಲಿ ವಿಷಯವೇ ಸ್ಪಷ್ಟವಾಗಿರುವುದಿಲ್ಲ, ರಾಜ್ಯದ ಸ್ಥಳೀಯ ಸಂಸ್ಥೆಗಳಿಗೆ 100 ಕೋಟಿ ರೂಪಾಯಿಗಳ ಹುಡ್ಕೋದಿಂದ ಸಾಗುತ್ತಿರುವ ಕಾಮಗಾರಿಗಳಲ್ಲಿ ಬಹಳಷ್ಟು ಅವ್ಯವಹಾರ ನಡೆಯಿತು.

MR.SPEAKER:- I have not given my consent.

ಶ್ರೀ ಡಿ.ಬಿ.ಚಂದ್ರೇಗೌಡ: ಆದ್ದರಿಂದ ತಾವು ಅಲ್ಲೇ ಇದು ಬರುವುದಿಲ್ಲವೆಂದು ಹೇಳಬೇಕಾಗಿತ್ತು.

ಅಧ್ಯಕ್ಷರು: ನಾನು ಇನ್ನೂ ಕನ್ಸೆಂಟ್ ಕೊಟ್ಟಿಲ್ಲ, 3 ನಿಮಿಷ ಮಾತನಾಡುತ್ತಾರೆ ನಂತರ ನಾನು ಏನು ಹೇಳಬೇಕೋ ಅದನ್ನು ಹೇಳುತ್ತೇನೆ.

ಶ್ರೀ ಎ.ರಾಮದಾಸ್(ಕೃಷ್ಣರಾಜ): ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಮಹತ್ವವಾದಂತಹ ವಿಷಯವನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ವಿಶೇಷವಾಗಿ ನಗರ ಪ್ರದೇಶದಲ್ಲಿರುವಂತಹ ಒಂದು ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟ ಹಾಗೆ ರಾಜ್ಯದಲ್ಲಿರುವಂತಹ 201 ನಗರ ಪ್ರದೇಶದ ಸ್ಥಳೀಯ ಸಂಸ್ಥೆಗಳಿಗೆ, ಪ್ರತಿಯೊಂದು ಕಾರ್ಪೊರೇಷನ್‌ಗೆ ಎರಡು ಕೋಟಿ ರೂಪಾಯಿಗಳು ಹಾಗೂ ಪ್ರತಿಯೊಂದು ಸಿಎಂಸಿಗೆ ಒಂದು ಕೋಟಿ ರೂಪಾಯಿ, ಪ್ರತಿಯೊಂದು ಟಿಎಂಸಿ ಗಳಿಗೆ ಐವತ್ತು ಲಕ್ಷ ರೂಪಾಯಿ,

ಪ್ರತಿಯೊಂದು ಟಿಪಿಗೆ 25 ಲಕ್ಷ ರೂಪಾಯಿಗಳ ಸಾಲವನ್ನು ಹುಡ್ಕೊದಿಂದ ತೆಗೆದುಕೊಂಡು ಬಂದು ರಾಜ್ಯ ಸರ್ಕಾರ ನೂರು ಕೋಟಿ ರೂಪಾಯಿಗಳ ಯೋಜನೆಯನ್ನು ತಯಾರಿಸಿ 19-5-2000 ರಂದು ಸರ್ಕಾರ ಹೊರಡಿಸಿರುವ ಸುತ್ತೋಲೆ ಪ್ರಕಾರ ಈ ಎಲ್ಲಾ ಕಾಮಗಾರಿಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಆದ್ಯತೆಯ ಆಧಾರದ ಮೇರೆಗೆ ಆಯಾಯ ಸ್ಥಳೀಯ ಸಂಸ್ಥೆಗಳು ನೀಡುವ ವರದಿಯಲ್ಲಿನ ಅಂಶಗಳನ್ನು ತೆಗೆದುಕೊಂಡು ಆಯಾಯಾ ಜಿಲ್ಲಾಧಿಕಾರಿಗಳು ಕ್ರೋಢೀಕರಿಸಿ ಬೇಕಾಗಿರುವಂಥ ಒಂದು ಟೆಂಡರ್‌ನ್ನು ಸ್ಥಳೀಯವಾಗಿ ಕರೆಯಬೇಕು ಎನ್ನುವುದು ಮೊದಲನೆಯ ಅಂಶ. ಸರ್ಕಾರಿ ಆಜ್ಞೆಯ ವಿರುದ್ಧವಾಗಿ ಈ ಸ್ಥಳೀಯ ಸಂಸ್ಥೆಗಳ ಸಾಲದ ಹಣವನ್ನು ರಾಜ್ಯದಲ್ಲಿ ಕೇಂದ್ರೀಕೃತವಾಗಿ ಟೆಂಡರ್‌ನ್ನು ಕರೆಯುವ ಮುಖೇನ ಉಲ್ಲಂಘಿಸುವ ಕೆಲಸ ಮೊದಲನೆಯದಾಗಿದೆ. ಎರಡನೆಯದಾಗಿ ಆಗಬೇಕಾಗಿರುವ ಕಾಮಗಾರಿಗಳ ಬಗ್ಗೆ ಅಲ್ಲಿ ಹೇಳಿದ್ದರೂ, ಮಾನೀಟರಿಂಗ್ ಸಮಿತಿಯನ್ನು ಮಾಡಿದ್ದರೂ, ಇದಕ್ಕೆ ಸಂಬಂಧಿಸಿದ ಯಾವುದೇ ಕ್ರಮವನ್ನು ಅದರ ಮುಖೇನ ತೆಗೆದುಕೊಳ್ಳದೆ ಕಾನೂನು ಬಾಹಿರವಾಗಿ ಕೇವಲ ಒಂದು ಸಂಸ್ಥೆ, ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಈ ಒಂದು ನೋಟಿಫಿಕೇಷನ್ ಕರೆಯುವ ಮುಖೇನ ಮೊದಲನೇ ಅಕ್ರಮ ಮಾಡಿದೆ. ಎರಡನೆಯದಾಗಿ, ನಿಯಮ ಉಲ್ಲಂಘನೆಗೆ ಸಂಬಂಧಪಟ್ಟಂತೆ ನಾನು ನಾಲ್ಕಾರು ಅಂಶಗಳನ್ನು ಹೇಳುವುದಕ್ಕೆ ಅವಕಾಶ ಇಲ್ಲವೆ? ಇದನ್ನು ಹೇಳದಿದ್ದರೆ ಹೇಗೆ?

(ಗೊಂದಲ)

ಅಧ್ಯಕ್ಷರು: ತಾವು ಪ್ರಿಲಿಮಿನರಿ ಸಬ್ ಮಿಷನ್ ಮಾಡಿ ಒಂದು ನಿಮಿಷದಲ್ಲಿ ತಮ್ಮ ಸಬ್‌ಮಿಷನ್ ಮುಗಿಸಿಬಿಡಿ, ಏವರಕ್ಕೆ ಹೋಗುವುದು ಬೇಡ.

ಶ್ರೀ ಎ.ರಾಮದಾಸ್: ನಾನು ನಿಮಗೆ ಕನ್‌ವಿನ್ಸ್ ಮಾಡಬೇಕಾದರೆ ಈ ಪದ್ಧತಿ ಏಕೆ?

ಅಧ್ಯಕ್ಷರು: ನೀವು ನನ್ನ ಕೊಠಡಿಗೆ ಬಂದು ನನ್ನನ್ನು ಕನ್‌ವಿನ್ಸ್ ಮಾಡಿ. ಇದಕ್ಕೆ ನನ್ನ ಅಭ್ಯಂತರ ಏನೂ ಇಲ್ಲ.

(ಗೊಂದಲ)

ಅಧ್ಯಕ್ಷರು: ಅವರು ಮಾತನಾಡಲಿ ನಂತರ ನಾನು ಮೆರಿಟ್ ಆಧಾರದ ಮೇಲೆ ಕನ್ಸಿಡರ್ ಮಾಡುತ್ತೇನೆ. ನನಗೆ ಈ ವಿಷಯವನ್ನು ಬಿಟ್ಟುಬಿಡಿ.

ಶ್ರೀ ಎ.ರಾಮದಾಸ್: ಕಾಮಗಾರಿಗಳಿಗೆ ಸಂಬಂಧಪಟ್ಟ ಹಾಗೆ ಮೊದಲನೆಯದಾಗಿ 92.64 ಕೋಟಿ ರೂಪಾಯಿಗಳ ಗುತ್ತಿಗೆಯನ್ನು ಸರ್ಕಾರಿ ಆಜ್ಞೆಯಲ್ಲಿ ಕೊಡಲಾಗಿತ್ತು. ಆದರೆ, ಸರ್ಕಾರದ ಒಪ್ಪಿಗೆ ಅಥವಾ ಬೇರೆ ಯಾವುದೇ ವಿಚಾರಗಳಿಲ್ಲದೆ, ನಗರಪಾಲಿಕೆ ಹಾಗೂ ಸ್ಥಳೀಯ ಸಂಸ್ಥೆಗಳ ಒಪ್ಪಿಗೆ ಇಲ್ಲದೇ ಇದನ್ನು 129.79 ಕೋಟಿ ರೂಪಾಯಿಗಳಿಗೆ

ಹೆಚ್ಚು ಮಾಡುವ ಮುಖೇನ, ಸುಮಾರು 37.15 ಕೋಟಿ ರೂಪಾಯಿಗಳ ಒಂದು ದೊಡ್ಡ ಅಕ್ರಮ ಇದರಲ್ಲಿ ಆಗಿದೆ. ಮೂರನೆಯ ಅಂಶ, ಸರ್ಕಾರಿ ಆಜ್ಞೆಯ ಪ್ರಕಾರ ಎಲ್ಲಾ ಕಾಮಗಾರಿಗಳನ್ನು ಜಿಲ್ಲಾಧಿಕಾರಿಗಳು ಮತ್ತು ಪಿಡಬ್ಲ್ಯೂಡಿ ಇಲಾಖೆಗೆ ವಹಿಸಬೇಕೆಂದು ಜಿ.ಓ.ದಲ್ಲಿ ಇದೆ. ಆದರೆ, ಸರ್ಕಾರಿ ಆಜ್ಞೆಯ ವಿರುದ್ಧವಾಗಿ ಕನ್ಸಲ್ಟೇಟವ್ ಇಂಜಿನಿಯರಿಂಗ್ ಸರ್ವೀಸ್ ಎನ್ನುವ ಒಂದು ಸಂಸ್ಥೆಗೆ 1.21 ಕೋಟಿ ರೂಪಾಯಿಗಳ ಕನ್ಸ್ಲ್ಟೇಷನ್ ಫೀ ಕೊಟ್ಟು ಆ ಎಲ್ಲಾ ಕೆಲಸಗಳನ್ನು ಅವರೇ ನಿರ್ವಹಿಸುವಂತೆ ಮಾಡಲಾಗಿದೆ. ನಾಲ್ಕನೆಯ ಅಂಶ ಏನೆಂದರೆ, ಯಾವುದೇ ಗುತ್ತಿಗೆಯನ್ನು ಕೊಟ್ಟಾಗ ಉಪ ಗುತ್ತಿಗೆಯನ್ನು ಕೊಡಬಾರದು ಎನ್ನುವ ನಿಯಮವಿದ್ದರೂ ಕೂಡ, ಗುಲ್ಬರ್ಗಾ ಡಿವಿಜನ್, ಮೈಸೂರು, ಮಂಡ್ಯ, ಬೆಳಗಾವಿ, ಈ ಭಾಗದಲ್ಲಿ ನಾಲ್ಕು ಜನ ಉಪ ಗುತ್ತಿಗೆಯನ್ನು ತೆಗೆದುಕೊಂಡು ಆ ಎಲ್ಲಾ ಕೆಲಸವನ್ನು ಮಾಡುವುದರ ಜೊತೆಗೆ ಪಿಡಬ್ಲ್ಯೂಡಿ ನಾರ್ಮ್ಸ್‌ಗೆ ವಿರುದ್ಧವಾಗಿ 13 ಕೋಟಿ ರೂಪಾಯಿಗಳ, ಮೊಬಲೈಜೇಷನ್ ಅಡ್ವಾನ್ಸನ್ನು ಕಾನೂನಿಗೆ ವಿರುದ್ಧವಾಗಿ ನೀಡಿರುವ ಈ ದೊಡ್ಡ ಪ್ರಕರಣ, ಸುಮಾರು 191 ಸ್ಥಳೀಯ ಸಂಸ್ಥೆಗಳ ಸಂಬಂಧಪಟ್ಟ ಹಾಗೆ ದೊಡ್ಡ ಅಕ್ರಮವಾಗಿರುವುದರ ಬಗ್ಗೆ ಹಾಗೂ ಸರ್ಕಾರಿ ಆಜ್ಞೆಯ ವಿರುದ್ಧವಾಗಿರುವ ಈ ಐದು ಅಂಶಗಳನ್ನು ನಿಮ್ಮ ಮುಂದೆ ಇಟ್ಟಿದ್ದೇನೆ, ಇದಕ್ಕೆ ಸಂಬಂಧಪಟ್ಟ ಹಾಗೆ ತಮ್ಮ ಅನುಮೋದನೆಯನ್ನು ನೀಡಿ, ಇದಕ್ಕೆ ಸಮಗ್ರವಾದ ಚರ್ಚೆಯನ್ನು ಮಾಡಲಿಕ್ಕೆ ನಮಗೆ ಅವಕಾಶ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಸದಸ್ಯರು ನಿಲುವಳಿ ಸೂಚನೆ ಏನು ಕಳುಹಿಸಿದ್ದಾರೆ, ಅದಕ್ಕೆ ತಾವು ದಯಮಾಡಿ ಅನುಮತಿಸಬೇಕೆಂದು ಕೋರುತ್ತೇನೆ.

MR.SPEAKER: Please leave it to me. I will consider on merits. I will give my ruling before the end of this day. ಇವತ್ತು ಸಂಜೆಯೊಳಗೆ ಕೊಡುತ್ತೇವೆ. You have not submitted any papers except making wild and vague allegations. ಸರ್ಕಾರದಿಂದ ವರದಿ ಕೇಳಿದ್ದೇನೆ, ವರದಿ ಏನು ಬರುತ್ತದೆ ಎಂಬುದನ್ನು ನೋಡಿಕೊಂಡು ನಂತರ ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಈ ವಿಷಯಗಳು ಹೊರಗೆ ಬರಬೇಕಾಗುತ್ತದೆ.

ಅಧ್ಯಕ್ಷರು: ಸರ್ಕಾರವನ್ನು ಕೇಳದೆ ನಾನು ಅನುಮತಿ ಕೊಡುವುದಕ್ಕಾಗುತ್ತದೆಯೇ, ನೀವೇ ಹೇಳಿ?

ಶ್ರೀ ಎ.ರಾಮದಾಸ್: ನಿಲುವಳಿ ಸೂಚನೆಗೂ ಈ ರೀತಿಯ ಕಾನೂನು ಅಂದರೆ ಹೇಗೆ?

ಅಧ್ಯಕ್ಷರು: ಇಲ್ಲಿ ಕಾನೂನು ಪ್ರಶ್ನೆಯಲ್ಲ.

(ಗೊಂದಲ)

ಆಪರು ಮೊದಲು ಏಕೆ ಕಾಗದ ಪತ್ರಗಳನ್ನು ಕೊಡಲಿಲ್ಲ? ನನಗೆ ಮೊದಲೇ ಕಳುಹಿಸಬಹುದಾಗಿತ್ತಲ್ಲವೆ?

ಶ್ರೀ ಎ.ರಾಮದಾಸ್: ಯಾವುದು ಸಾರ್ವಜನಿಕ ಮಹತ್ವ ಇಪೆ ಅದಕ್ಕೆ ನಿಲುವಳಿ ಸೂಚನೆ ಕೊಟ್ಟಿರುವುದು ಇದೆ, ಇದು 191 ಸ್ಥಳೀಯ ಸಂಸ್ಥೆಗಳ ವಿಚಾರವಾಗಿರುವುದರಿಂದ, ದಯಮಾಡಿ ತಾವು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಇದು ನಿಲುವಳಿ ಸೂಚನೆಯಾಗುವುದಿಲ್ಲ. ಇದು ನನ್ನ ರೂಲಿಂಗ್. ಫರ್ ಪರ್ ಎಪಡೆನ್ಸ್ ನೀವು ಏನು ಕೊಡುತ್ತೀರೋ ಅದನ್ನು ನನ್ನ ಕಛೇರಿಗೆ ಕಳುಹಿಸಿ.

ಶ್ರೀ ಎ.ರಾಮದಾಸ್: ನಾನು ಎಲ್ಲಾ ಅಂಶವನ್ನು ಅಲ್ಲಿ ಇಟ್ಟಿದ್ದೇನೆ, ತಾವು ನಮ್ಮ ರಕ್ಷಣೆಗೆ ಬರಬೇಕು.

ಅಧ್ಯಕ್ಷರು: ತಾವು ಯಾವ ಪೇಪರ್ ಅನ್ನು ಕೊಟ್ಟಿಲ್ಲ. ನಾವು ನಿಮ್ಮ ರಕ್ಷಣೆಗೆ ಬೇಕಾದಷ್ಟು ಸಾರಿ ಬಂದಿದ್ದೇವೆ. ನಾನು ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ, ಬೇರೆ ಯಾವ ರೂಪದಲ್ಲಿ ತೆಗೆದುಕೊಳ್ಳಬೇಕು ಎಂಬುದನ್ನು ನಾನು ಆಲೋಚನೆ ಮಾಡಬೇಕು, ವರಟು ಬಂದ ನಂತರ ಹಾಗೂ ತಾವು ಏನಾದರೂ ಇತರೆ ಎಪಡೆನ್ಸ್ ಕೊಡಿ ನಂತರ ನಾನು ಅದನ್ನು ಕನ್ಸಿಡರ್ ಮಾಡುತ್ತೇನೆ.

(ಗೊಂದಲ)

ಶ್ರೀ ಎ.ರಾಮದಾಸ್: ತಮ್ಮ ಸಂಪ್ರದಾಯದ ಪ್ರಕಾರ ಇದನ್ನು ಕನವರ್ಟ್ ಮಾಡಿ ಕೊಟ್ಟಿದ್ದೀರಿ.....

ಶ್ರೀ ಜಗದೀಶ್ ಶೆಟ್ಟರ್: ಇದು ಸಾರ್ವಜನಿಕ ಮಹತ್ವದ ವಿಷಯ, ಸಾರ್ವಜನಿಕರ ಹಣ ವ್ಯಯವಾಗುತ್ತಿದೆ, ಭ್ರಷ್ಟಾಚಾರ ನಡೆಯುತ್ತಿದೆ, ಅದು ಯಾವುದೇ ರೂಪದಲ್ಲಿರಲಿ ಚರ್ಚೆಗೆ ಅವಕಾಶ ಕೊಡಲಿಲ್ಲವೆಂದರೆ ಏನರ್ಥ?

(ಗೊಂದಲ)

ಅಧ್ಯಕ್ಷರು: ಹಾಗೆಯೇ ವೇಗ್ ಆಗಿ ಹೇಳಿದರೆ ಹೇಗೆ? ಪೇಪರ್ಸ್ ಇಲ್ಲವಲ್ಲಾ.....

(ಗೊಂದಲ)

SRI D.B.CHANDREGOWDA (Minister for Law & Parliamentary Affairs): At least, let me register my

protest.....

MR.SPEAKER: They have not given any papers. I will consider on merits.

ಶ್ರೀ ಜಗದೀಶ್ ಶೆಟ್ಟರ್: ನಮಗೆ ಹೇಳಲಿಕ್ಕೆ ಅವಕಾಶಕೊಟ್ಟರೆ ಹೇಳುತ್ತೇವೆ. ನಾವು ಸದನದಲ್ಲಿ ಪೇಪರ್ಸ್ ಮಂಡಿಸುತ್ತೇವೆ.

(ಗೊಂದಲ)

ನಾನು ಇವತ್ತು ಕೆಲವೊಂದು ಭ್ರಷ್ಟಚಾರದ ಬಗ್ಗೆ ಹೇಳಬೇಕಾಗುತ್ತದೆ. ನಾವು ಯಾವುದೇ ರೂಪದಲ್ಲಿ ಆದರೂ ಚರ್ಚೆ ಮಾಡಲು ನಮಗೆ ಅವಕಾಶ ಕೊಡಿ.

MR.SPEAKER: This is not a fit case for adjournment motion.

ಶ್ರೀ ಜಗದೀಶ್‌ಶೆಟ್ಟರ್: ಹಾಗಾದರೆ ಬೇರೆ ರೂಪದಲ್ಲಿ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು: ಆ ವಿಷಯ ನನಗೆ ಬಿಡಿ ನಂತರ ನೋಡುತ್ತೇನೆ.

(ಗೊಂದಲ)

ಶ್ರೀ ಎಸ್.ಸುರೇಶ್ ಕುಮಾರ್: ಮೊದಲನೆಯದಾಗಿ ತಾವು ಮೂರು ನಿಮಿಷದಲ್ಲಿ ಮುಗಿಸಿ ಎಂದು ಹೇಳಿದಿರಿ, ಆ ಮೂರು ನಿಮಿಷದಲ್ಲಿ ನಾವು ನಿಮ್ಮನ್ನು ಕನ್‌ವಿನ್ಸ್ ಮಾಡುವುದಕ್ಕೆ ಸಾಧ್ಯವೆ? ನಂತರದಲ್ಲಿ ತಾವು ಸಂಜೆಯವರೆಗೆ ಟೈಮ್ ಕೊಡಿ ನಂತರ ಹೇಳುತ್ತೇನೆಂದು ಹೇಳಿದಿರಿ, ತಾವು ಇದು ನಿಲುವಳಿ ಸೂಚನೆಗೆ ಬರುವುದಿಲ್ಲವೆಂದು ಈಗಾಗಲೇ ತೀರ್ಪು ಕೂಡ ಕೊಟ್ಟು ಬಿಟ್ಟಿದ್ದೀರಿ.

MR.SPEAKER: This is not a fit case for adjournment motion. You please resume your seat.

SRI S.SURESH KUMAR:- Sir, Please allow this subject in some other form.

ಅಧ್ಯಕ್ಷರು: ಅದನ್ನು ನನಗೆ ಬಿಡಿ.

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ಪಟ್ಟಯನ್ನು ನೋಡಿದೆ ಜೀರೋ ಅವರ್‌ನಲ್ಲಿ 47 ವಿಷಯಗಳಿವೆ. ಜೀರೋ ಅವರ್ ಮುಗಿಸಬಹುದು. ಆದರೆ ಪ್ರಶ್ನೆ ಉಪ ಪ್ರಶ್ನೆ ಇದೆಲ್ಲಾ ಇರುತ್ತದೆ.

ಅಧ್ಯಕ್ಷರು: ತಾವು ಉತ್ತರವೇನೂ ಕೊಡಬೇಕಾಗಿಲ್ಲ. ಜಸ್ಟ್ ಮೆನ್‌ಷನಿಂಗ್ ಅಷ್ಟೆ.

ಶ್ರೀ ಡಿ.ಬಿ.ಚಂದ್ರೇಗೌಡ: ನನ್ನದೇನು ಅಂದರೆ ತಾವು ಬಿಲ್ಸ್ ತೆಗೆದುಕೊಂಡು ಬಿಟ್ಟರೆ ಅದನ್ನು ಮುಗಿಸಿ ಆಮೇಲೆ ಬೇಕಾದರೆ ಜೀರೋ ಹವರ್ ವಿಷಯಗಳನ್ನು ತೆಗೆದುಕೊಳ್ಳಬಹುದು.

ಶ್ರೀ ಡಿ.ಪಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೇ, ಉತ್ತರ ಕೊಡಬೇಕಾಗಿಲ್ಲವೆಂದು ತಾವು ಹೇಳಬಾರದು ಸಾರ್.

ಅಧ್ಯಕ್ಷರು: ರೂಲ್ಸ್‌ನಲ್ಲಿ ರಿಪ್ಲೈ ಕೊಡಬೇಕೆಂದು ಇಲ್ಲ. ಅದಕ್ಕಾಗಿ ಹೇಳುತ್ತಿದ್ದೇನೆ ಅಷ್ಟೆ. ರೂಲ್ಸ್‌ನಲ್ಲಿ ತೋರಿಸಿ ರಿಪ್ಲೈ ಕೊಡಬೇಕೆಂದು ಎಲ್ಲಿದೆ? ಜೀರೋ ಹವರ್‌ನಲ್ಲಿ 44 ಅಥವಾ 47 ನೋಟೀಸ್‌ಗಳು ಇದ್ದರೂ ಕೂಡ ನಾವು ತೆಗೆದುಕೊಳ್ಳುವುದು ಎರಡು ಮೂರು ಅಷ್ಟೆ. ಅದಕ್ಕಿಂತ ಹೆಚ್ಚಿಗೆ ತೆಗೆದುಕೊಳ್ಳುವುದಿಲ್ಲ. ಪಟ್ಟಯಲ್ಲಿರುತ್ತದೆ ಅಷ್ಟೆ.

ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ: ಅಧ್ಯಕ್ಷರು ಆ ತರಹ ಹೇಳಿಬಿಟ್ಟರೆ ಕ್ಷೇತ್ರದಲ್ಲಿ ಜನ ನಮಗೆ ಛೀಮಾರಿ ಹಾಕುತ್ತಾರೆ.

ಶ್ರೀ ಸಿ.ಆರ್.ಸಗೀರ್ ಅಹ್ಮದ್: ಎಲ್ಲರೂ ಒಂದೇ ಸಾರಿ ಎದ್ದು ನಿಂತರೆ ಹೇಗೆ?

ಶ್ರೀ ಡಿ.ಪಿ.ಸದಾನಂದಗೌಡ: ಆಯಿತು. ನಾವು ಮಾರ್ಗ ಇದ್ದಲ್ಲಿ ಮಾತ್ರ ಬಸ್ ಓಡಿಸುತ್ತೇವೆ. ಮಾರ್ಗ ಇಲ್ಲದಿರುವ ಕಡೆ ಬಸ್ ಓಡಿಸುವುದಿಲ್ಲ.

ಶ್ರೀ ಸಿ.ಆರ್.ಸಗೀರ್ ಅಹ್ಮದ್: ನಾನು ಅದೇ ವಿಚಾರ ಹೇಳಿದ್ದು ಬೇರೆ ವಿಚಾರ ಹೇಳಲಿಲ್ಲ. ಅಧ್ಯಕ್ಷರಲ್ಲಿ ನಾವೇನು ವಿನಂತಿ ಮಾಡಿಕೊಂಡೆವು ಅಂದರೆ, ಸದಸ್ಯರು ಏನು ಪ್ರಶ್ನೆ ಕೇಳುತ್ತಾರೆ. ಅದಕ್ಕೆ ಉತ್ತರ ಕೊಡುವುದಕ್ಕೆ ಸರ್ಕಾರ ಸಿದ್ದವಾಗಿದೆ.

ಅಧ್ಯಕ್ಷರು: ಭಾರತೀಯ ಜನತಾ ಪಕ್ಷದವರು ಎರಡು, ಜನತಾದಳ ಸಂಯುಕ್ತ ಎರಡು ಕಾಂಗ್ರೆಸ್‌ನವರು ಎರಡು ಇತರರು ಎರಡು ಹೀಗೆ ಒಟ್ಟು ಆರೇಳು ವಿಷಯಗಳನ್ನು ರೈಸ್ ಮಾಡಿ.

ಶ್ರೀ ಜಗದೀಶ್ ಶೆಟ್ಟರ್: ಜೀರೋ ಹವರ್ ಕಾಲಾವಧಿಯನ್ನು ಒಂದು ಗಂಟೆ ಮಾಡಿಬಿಡಿ.

ಅಧ್ಯಕ್ಷರು: ಒಂದು ಗಂಟೆ ಬೇಡಿ. ಸಾಮಾನ್ಯವಾಗಿ ಅರ್ಧಗಂಟೆ ಅದಕ್ಕೆ ಅವಕಾಶ ಕೊಡಲಾಗುತ್ತಿತ್ತು. ಅರ್ಧಗಂಟೆ ಸಮಯದಲ್ಲಿ ಮುಗಿಸಿ.

ಶ್ರೀ ಡಿ.ಬಿ.ಚಂದ್ರೇಗೌಡ: ಬಿಲ್ಸ್ ಪಾಸ್ ಮಾಡಬೇಕು. ಜೀರೋ ಹವರ್‌ನಲ್ಲಿ ವಿಷಯಗಳನ್ನು ರೈಸ್ ಮಾಡಿ ಸರ್ಕಾರ ಉತ್ತರ ಹೇಳಬೇಕೆಂದು ಹೇಳುತ್ತಾರೆ.

ಅಧ್ಯಕ್ಷರು: ಮಾನ್ಯ ಚಂದ್ರೇಗೌಡರೇ ಉತ್ತರ ಬೇಕಾಗಿಲ್ಲ. ಉತ್ತರ ಕೊಡಲೇಬೇಕೆಂದು ಕೇಳುವ ಹಾಗೆ ಇಲ್ಲ.

ಶ್ರೀ ಸಿ.ಚನ್ನಿಗಪ್ಪ: ಮಾನ್ಯ ಅಧ್ಯಕ್ಷರೆ, ನಮ್ಮ ಪಾರ್ಟಿ ವತಿಯಿಂದ ಎರಡು ವಿಷಯಗಳನ್ನು ರೈಸ್ ಮಾಡಲು ಅವಕಾಶ ಕೊಡಬೇಕು.

ಅಧ್ಯಕ್ಷರು: ಆಯಿತು ಕೊಡುತ್ತೇನೆ, ಕುಳಿತುಕೊಳ್ಳಿ.